ಮೂಲ ದಾವಾ ಸಂಖ್ಯೆ. 45/2016 ಡಿ ಡಬ್ಲ್ಯೂ 2

(ದಿನಾಂಕ 18-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಎಂ ಜೆ ವಕೀಲರಿಂದಃ-

ನಾನು ವ್ಯವಸಾಯ ಮಾಡುತ್ತೇನೆ. ನನಗೆ ಕಂದಾಯ ಇಲಾಖೆಯಲ್ಲಿ ಮತ್ತು ನ್ಯಾಯಾಲಯದಲ್ಲಿ ಹಾಜರಾಗಿರುವುದರಿಂದ ನನಗೆ ಅನುಭವ ಇದೆ. ನಾನು ಬೇರೆ ದಾವೆಗಳಲ್ಲಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿದ್ದೇನೆ. ದಾವಾಸ್ತಿ ಎಲ್ಲಿ ಬರುತ್ತದಂತಾ ನಾನು ನೋಡಿದ್ದೇನೆ. ದಾವಾಸ್ತಿಯ ಚಕ್ಕುಬಂದಿ ಪೂಃ ಮುಟುಗನಹಳ್ಳಿಯವರ ಜಮೀನಿದೆ ಅವರ ಹೆಸರು ನನಗೆ ಗೊತ್ತಿಲ್ಲ, ಪಃ ದಾರಿ ಇದೆ, ಉಃ ಸದರಿ ಸರ್ವೆ ನಂಬರಿನ ಉಳಿದ ಜಮೀನು ಹಾಗೂ ದಃರಸ್ತೆ. ಪ್ರತಿವಾದಿ ವಿಜಯಕುಮಾರು ಮತ್ತು ನಾನು ಸಂಬಂಧಿಕರು ಎಂದರೆ ಸರಿಯಲ್ಲ ಆದರೆ ಕುಲಸ್ಥರು ಇರುತ್ತೇವೆ. ಪ್ರತಿವಾದಿ ಕುಟುಂಬ ಮತ್ತು ದಾವಾಸ್ತಿ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಆದರೂ ಮಾಹಿತಿ ಇದೆ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಚನ್ನಬಸಮ್ಮ ಯಾವಾಗ ಮರಣ ಹೊಂದಿರುತ್ತಾರೆಂದು ನನಗೆ ಗೊತ್ತಿಲ್ಲ. ಅವರಿಗೆ ವಿರೂಪಾಕ್ಷಪ್ಪ ಏಕೈಕ ಮಗ ವಿರೂಪಾಕ್ಷಪ್ಪ ಯಾವಾಗ ಮರಣ ಹೊಂದಿರುತ್ತಾರೆಂದು ನನಗೆ ಮಾಹಿತಿ ಇಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರಕ್ಕೆ ಪ್ರತಿವಾದಿಯ ಹೇಳಿಕೆಯಂತೆ ಬರೆಯಲಾಗಿದೆ ಎಂದರೆ ಸರಿಯಲ್ಲ ನಾನು ಹೇಳಿ ಬರೆಸಿದ್ದೇನೆ ಎನ್ನುತ್ತಾರೆ. ಸದರಿ ಮಾಹಿತಿಯನ್ನು ನಿಮಗೆ ಯಾರು ಹೇಳಿದರೆಂದರೆ ಸಾಕ್ಷಿಯು ನಾನು ಸ್ವಂತ ಅನುಭವದಂತೆ ಹೇಳಿದ್ದೇನೆ ಎನ್ನುತ್ತಾರೆ. ಚನ್ನಬಸಮ್ಮ ಇವರ ಮರಣದ ನಂತರ ದಾವಾ ಜಮೀನನ್ನು ವಿರೂಪಾಕ್ಷಪ್ಪ ಇವರು ಸಾಗು ಮಾಡುತ್ತಿದ್ದರು. ವಿರೂಪಾಕ್ಷಪ್ಪ ಇವರು ತನ್ನ ತಾಯಿಗೆ ಒಬ್ಬನೇ ಮಗನಾಗಿರುವುದರಿಂದ ಅವನು ತನ್ನ ಸ್ವಂತ ಅನುಭವದಲ್ಲಿ ಸಾಗು ಮಾಡುತ್ತಿದ್ದರೆಂದರೆ ಸರಿ. ವಿರೂಪಾಕ್ಷಪ್ಪ ಇವರಿಗೆ ತನ್ನ ತಾಯಿಯಿಂದ ಬಂದ ಜಮೀನಿನಲ್ಲಿ 4 ಎಕರೆ ಜಮೀನು ಮಾರಾಟ ಮಾಡುವ ಅಧಿಕಾರ ಇತ್ತಾ ಇಲ್ಲವೆಂದರೆ ಸಾಕ್ಷಿಯು ಅಧಿಕಾರ ಇತ್ತು ಎನ್ನುತ್ತಾರೆ. ಸನ್ 1971 ಇಸ್ವಿಯಲ್ಲಿ ಜಮೀನುಗಳ ಪಹಣಿಯಾಗಿರಲಿಲ್ಲವೆಂದರೆ ಸರಿ.

ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಚನ್ನಬಸಮ್ಮ ಇವರು 1992-93 ನೇ ಸಾಲಿನಲ್ಲಿ ನೇರವಾಗಿ ಪ್ರಭಾಕರ ಇವರ ಹೆಸರಿಗೆ ಹಕ್ಕುಬದಲಾವಣೆ ಮಾಡಿಸಿರುತ್ತಾಳಂತಾ ಹೇಳಿರುವುದು ಸುಳ್ಳು ಎಂದರೆ ಸಾಕ್ಷಿಯು ಚನ್ನಬಸಮ್ಮ ಅದನ್ನು ಮಾಡಿಸಿಲ್ಲ ಅವರು ಆಗ ಮರಣ ಹೊಂದಿದ್ದರು. ಸನ್ 2013 ಮತ್ತು 2019 ರಲ್ಲಿ ಮ್ಯುಟೇಶನ್ ಗಳಾಗಿ 4 ಎಕರೆ ಜಮೀನು ಪ್ರತಿವಾದಿಯ ಹೆಸರಿಗೆ ಬಂದಿರುತ್ತದಂತಾ ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ವಾದಿಯು ಹೇಳುವಂತೆ ದಾಖಲೆ ನಂ.53, 56/30-12-1970 ರ ಪ್ರಕಾರ ಕೊಬಜ್ಜಿ ವೀರಭದ್ರಪ್ಪನವರ ಮಗ ವಾಮದೇವಪ್ಪನವರಿಗೆ

ಮೂಲ ದಾವಾ ಸಂಖ್ಯೆ. 45/2016 ಡಿ ಡಬ್ಲ್ಯೂ 2

ಬೆಳಗಿ ದೊಡ್ಡವೀರಪ್ಪನ ಮಗ ವಿರೂಪಾಕ್ಷಪ್ಪ ಕ್ರಯಕ್ಕೆ ಕೊಟ್ಟಿರುತ್ತಾನೆನ್ನುವ ಅಂಶ ಸುಳ್ಳಿನಿಂದ ಕೂಡಿದೆ ಅಂತಾ ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಕೆ ವಾಮದೇವಪ್ಪ ಇವರಿಂದ ವಾದಿಯಾದ ಕೆ.ನಿಂಗಪ್ಪ ಇವರು ದಿನಾಂಕಃ15-04-1971 ರಂದು ದಾಖಲೆ ನಂ.106/1971-72 ರಂತೆ ಕ್ರಯಕ್ಕೆ ಪಡೆದಿರುತ್ತಾನೆನ್ನುವ ಮಾತುಗಳು ಸುಳ್ಳು ಅಂತಾ ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಕ್ರಯ ವ್ಯವಹಾರಗಳು ಕಾನೂನುಬಾಹಿರವಾಗಿರುತ್ತದೆಂದು ಹೇಳಿ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ವಾದಿಯು ದಾವಾಸ್ತಿಯಲ್ಲಿ ಎಂದಿಗೂ ಸ್ವಾಧೀನಾನುಭಾದಲ್ಲಿ ಇರುವುದಿಲ್ಲ ಅಂತಾ ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ವಾದಿಯು ಹೇಳುವಂತೆ ದಿನಾಂಕಃ10-02-2016 ರಂದು ಮತ್ತು 13-02-2016 ರಂದು ದಾವಾ ಶೆಡ್ಯೂಲ್ ಆಸ್ತಿಯಲ್ಲಿ ಪ್ರತಿವಾದಿಯು ಅಕ್ರಮ ಪ್ರವೇಶ ಮಾಡಿ ವಾದಿಯ ಸ್ವಾಧೀನವನ್ನು ತಪ್ಪಿಸಲು ಪ್ರಯತ್ನಿಸಿರುತ್ತಾನೆನ್ನುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವಂತಾ ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ವಾದಿಯೇ ಸಾವಧೀನದಲ್ಲಿರುತ್ತಾನೆಂದರೆ ಸಾಕ್ಷಿಯು ಸಂಪೂರ್ಣ ಜಮೀನಿನಲ್ಲಿ ಪ್ರತಿವಾದಿ ಮತ್ತು ಅವರ ಕುಟುಂಬದವರು ಸ್ವಾಧೀನದಲ್ಲಿರುತ್ತಾರೆನ್ನುತ್ತಾರೆ. ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಕೆ ವಾಮದೇವಪ್ಪ ಇವರ ಹೆಸರಿನಲ್ಲಿ ಪಹಣಿ ಮತ್ತು ಕಂದಾಯ ದಾಖಲೆಗಳು ಇಲ್ಲದೇ ಇರುವುದರಿಂದ ಅವರಿಗೆ ಕ್ರಯಕ್ಕೆ ಕೊಡುವ ಅಧಿಕಾರ ಇದ್ದಿಲ್ಲ ಅಂತಾ ಹೇಳಿ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ಸನ್ 1971 ರಲ್ಲಿ ಪಹಣಿಗಳು ಅಪ್ ಟೂ ಡೇಟ್ ಆಗಿರಲಿಲ್ಲವೆಂದರೆ ಸರಿಯಲ್ಲ. ವಾಮದೇವಪ್ಪ ಇವರು ತಾವು ಊರಮುಂದಿನ ಜಮೀನನ್ನು ಖರೀದಿ ಮಾಡಬೇಕೆನ್ನುವ ಉದ್ದೇಶದಿಂದ ದಾವಾ ಜಮೀನನ್ನು ಮಾರಾಟ ಮಾಡಿದ್ದಾರೆಂದರೆ ಅವರು ಯಾವ ಕಾರಣಕ್ಕಾಗಿ ಮಾರಾಟ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ ಮಾರಾಟ ಮಾಡಿದ್ದು ನಿಜ ಆದರೆ ದಾಖಲೆ ಇಲ್ಲದ ಹಾಗೆ ಹೇಗೆ ಮಾರಾಟ ಮಾಡಿದ್ದಾರೆನ್ನುವುದು ಪ್ರಶ್ನೆಯಾಗಿರುತ್ತದೆನ್ನುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ